1

# ಬೈಬಲಿನ ದೈವ ಪ್ರೇರಣೆಯ ಆಂತರಿಕ ಪುರಾವೆಗಳು

ಶತಮಾನಗಳಲ್ಲಿ, ಸ್ಪಷ್ಟವಾದ ಮನಸ್ಸುಗಳು ಬೈಬಲಿನಲ್ಲಿಯ ವಿಶ್ವಾಸಕ್ಕೆ ಬೆಂಬಲ ಕೊಡುತ್ತಿರುವ ಎರಡು ಮಹಾ ಸ್ತಂಭಗಳನ್ನು ಕಂಡುಕೊಂಡಿರುತ್ತವೆ: ಹಿಜ್ಕೀಯನ ಸುರಂಗ ಮಾರ್ಗದ[1] ಸಂಶೋಧನೆಯಂಥ ಬೈಬಲಿನ ಹೊರಗೆ ದೊರೆತ ಪುರಾವೆ ಹಾಗೂ ಬೈಬಲಿ ನೊಳಗೆ ಕಂಡುಕೊಂಡ ಅದರ ದೈವಿಕ ಮೂಲದ ಕಡೆಗೆ ತೋರಿಸುವ ಪುರಾವೆ. ಈ ಪಾಠವು ಆಂತರಿಕ ಪುರಾವೆಗಳಿಗೆ ನಿಯಂತ್ರಿಸಿಕೊಂಡಿದೆ: (1) ಪರಲೋಕದ ಕರ್ತೃತ್ವವನ್ನು ತೋರಿಸುವ ಸಾಮಾನ್ಯ ಬೈಬಲಿನ ಗುಣಲಕ್ಷಣಗಳು, (2) ಬರಲಿಕ್ಕಿದ್ದ ಮೆಸ್ಸೀಯನ ಪುರಾತನ ಮುಂತಿಳಿಸುವಿಕೆಗಳ ಪರಿಣಾಮ, (3) ಯೇಸು ಯಾವ ರೀತಿಯ ವ್ಯಕ್ತಿಯಾಗಿದ್ದನು, ಹಾಗೂ (4) ಅವಿಶ್ವಾಸಿಗಳ ಯೋಚನೆಯ ಮೇಲಿದ್ದ ಬೈಬಲಿನ ಪರಿಣಾಮ.

## "ಇರುವುದು ಆದರೆ ಒಂದೇ"

ಇಪ್ಪತ್ತು ಸಾವಿರ ಪುಸ್ತಕಗಳಿರುವ ಒಂದು ಕೋಣೆಯಲ್ಲಿ ಸಾಯುತ್ತಿದ್ದ ಸ್ಕೊಟಿಶ್ ಕವಿ ಮತ್ತು ಕಾದಂಬರಿಕಾರ ಸರ್ ವಾಲ್ಟರ್ ಸ್ಕಾಟ್ ಅವರಿಗೆ ಒಬ್ಬ ಸ್ನೇಹಿತನು ಅವರಿಗೆ ಯಾವ ಪುಸ್ತಕವು ಓದಲ್ಪಡಲು ಇಷ್ಟಪಡುವರೆಂದು ಕೇಳಿದಾಗ ಅವರು ಆಶ್ಚರ್ಯಗೊಂಡು "ನೀನು ಕೇಳಬೇಕೋ? ಇದೆ, ಆದರೆ ಒಂದೇ ಇದೆ!" ಎಂದು ಉತ್ತರ ಕೊಟ್ಟರು.[2]

ಬೈಬಲಿನ ಅನೇಕ ಅದ್ವಿತೀಯವಾದ ವೈಶಿಷ್ಟ್ಯಗಳು ಪರಲೋಕದ ಕರ್ತೃತ್ವವನ್ನು ತೋರಿಸುತ್ತದೆ. ಬೈಬಲಿನ ಸ್ಪಷ್ಟವಾಗಿ ಕಾಣುವ ಗುಣಲಕ್ಷಣವು, ವಿವಿಧತೆಗಳ ಮಧ್ಯದಲ್ಲಿ ಅತ್ಯಾಶ್ಚರ್ಯಕರವಾಗಿ ಐಕ್ಯತೆ ಇರುವಂಥದ್ದು. ಸರಳತೆಯನ್ನೂ ಆಳವನ್ನೂ ಒಂದಾಗಿ ಕೂಡಿಸುವ ರೀತಿಯಲ್ಲಿ ಬೈಬಲಿಗೆ ಸಮಾನವಾದ ಬೇರೆ ಯಾವುದೇ ಪುಸ್ತಕವಿರುವದಿಲ್ಲ. ದೇವರ ವಾಕ್ಯವು ಸರಿಸಮಾನತ್ವವಿಲ್ಲದ, ತಾರತಮ್ಯವಿಲ್ಲದ, ಕ್ರೋಢೀಕೃತವಾಗಿಯೂ ಆತಂಕವಿಲ್ಲದ ರೀತಿಯಲ್ಲಿ ಪ್ರಕಟಿಸಲ್ಪಟ್ಟಿದೆ. ಇದೊಂದೇ ಪರಿಪೂರ್ಣವಾದ ಪುಸ್ತಕವಾಗಿದೆ. ಇದನ್ನು ಪರಿಷ್ಕರಿಸುವ ಇಲ್ಲವೇ ತಿದ್ದುಪಡಿ ಮಾಡುವ ಅಗತ್ಯತೆಯಿರುವದಿಲ್ಲ.

ಅನೇಕ ಪುಸ್ತಕಗಳು ಸಾಹಿತ್ಯದ ಅತ್ಯುತ್ತಮ ಕೃತಿಗಳಾಗಿರುತ್ತವೆ. ಆದಾಗ್ಯೂ ಅತ್ಯುತ್ತಮವಾಗಿ ವಿವರಿಸಲ್ಪಡುವಂಥದ್ದು "ಒಂದೇ ಒಂದು" ಇರುತ್ತದೆ. ದೇವರ ವಾಕ್ಯವು ಯಾವುದೇ ಪುರಾತನ ಕಾರ್ಯಕ್ಕಿಂತ ಮೇಲಾಗಿ ನಿಲ್ಲುತ್ತದೆ. ವಿಷಯಕ್ಕೆ ಸಂಬಂಧಿಸಿ ಕೆಲವು ಪುರಾತನ ಕೃತಿಗಳು ನಮ್ಮ ದಿನಗಳ ವರೆಗೆ ಉಳಿದು ಕೊಂಡಿವೆ. ಆದರೆ ಪರಿಶುದ್ಧ ಬರಹಗಳ ಅನೇಕ ಪ್ರತಿಗಳು ನಮ್ಮಲ್ಲಿರುತ್ತವೆ.

ಬೈಬಲಿನ ಈ ಗುಣಧರ್ಮಗಳಲ್ಲಿ ಪ್ರತಿಯೊಂದೂ ಈ ಪುಸ್ತಕದಲ್ಲಿ ಇರುವ "ಬೈಬಲಿನ ವಿಶೇಷ ಗುಣಲಕ್ಷಣಗಳು" ಎಂಬ ಪಾಠದಲ್ಲಿ ಆಳವಾಗಿ ಚರ್ಚಿಸಲ್ಪಡುತ್ತದೆ.

# "ಪ್ರವಾದಿಗಳನ್ನು ನೀವು ನಂಬುವಿರೋ?"

"ಅಗ್ರಿಪ್ಪ ರಾಜನೇ, ನೀನು ಪ್ರವಾದಿಗಳನ್ನು ನಂಬುತ್ತೀಯೋ? ನೀನು ನಂಬುತ್ತೀ ಎಂಬುದನ್ನು ನಾನು ಬಲ್ಲೆನು" (ಅಪೊಸ್ತಲರ ಕೃತ್ಯ 26:27) ಎಂದು ಹೇಳಿ, ಹಳೇ ಒಡಂಬಡಿಕೆಯನ್ನು ಗಂಭೀರವಾಗಿ ತೆಗೆದು ಕೊಂಡ ಅರಸನ ಮುಂದೆ ತಾನು ನಿಂತಿದ್ದೇನೆಂದು ಪೌಲನು ಸ್ಪಷ್ಟವಾಗಿ ತಿಳಿದಿದ್ದನು. ಹಳೇ ಒಡಂಬಡಿಕೆಯಲ್ಲಿ ಬರಲಿಕ್ಕಿದ್ದ ಮೆಸ್ಸೀಯನ ಬಗ್ಗೆ ಪ್ರವಾದನೆಗಳನ್ನು ಅರಸ ಅಗ್ರಿಪ್ಪನು ಎಷ್ಟು ಅಭ್ಯಾಸ ಮಾಡಿದ್ದನೆಂಬುದು ನಮಗೆ ತಿಳಿದಿರುವದಿಲ್ಲ; ಅವನು ತಾನೇ ಭಾಗಶಃ ಯೆಹೂದ್ಯನಾಗಿದ್ದನು.[3] ಯೆಹೂದ್ಯನಾಗಲೀ ಅನ್ಯನಾಗಲೀ ಹಳೇ ಒಡಂಬಡಿಕೆಯನ್ನು ಓದುವವರು - ಯೇಸುವಿನ ಆಗಮನಕ್ಕಾಗಿ ಬಹಳ ಮೊದಲು ಬರೆಯಲ್ಪಟ್ಟಿದ್ದನ್ನು ಓದುವವರು - ಪ್ರವಾದಿಗಳು ಹೇಗೆ ಸ್ಪಷ್ಟವಾಗಿ ಮೆಸ್ಸೀಯನ ಬಗ್ಗೆ ಮುಂತಿಳಿಸಿರುವರು ಎಂಬುದನ್ನು ನೋಡುವಾಗ ಪ್ರವಾದಿಗಳನ್ನು ನಂಬದೇ ಇರಲಾರರು.

ಯೇಸುವಿನ ಬಗ್ಗೆ ಸಾಕ್ಷಿಯು ಪ್ರವಾದನೆಯ ಪ್ರಮುಖ ಉದ್ದೇಶವಾಗಿತ್ತು (ಪ್ರಕಟನೆ 19:10ಸಿ). ಆತನ ಬಗ್ಗೆ ಪ್ರವಾದಿಗಳು ಸಾಕ್ಷಿಕೊಟ್ಟರು (ಅಪೊಸ್ತಲರ ಕೃತ್ಯ 10:43). ಸ್ತ್ರೀ ಸಂತಾನವು ಸೈತಾನನ ತಲೆಯನ್ನು ಜಜ್ಜುವುದು (ಆದಿಕಾಂಡ 3:15; ಗಲಾತ್ಯ 4:4; ಇಬ್ರಿಯ 2:12-14) ಆತನು ಅಬ್ರಹಾಮನ ಸಂತತಿಯಾಗಿರುವನು (ಆದಿಕಾಂಡ 18:18; ಗಲಾತ್ಯ 3:16). ಯೆಹೂದ ಗೋತ್ರದವನು (ಆದಿಕಾಂಡ 49:10), ದಾವೀದನ ಕುಟುಂಬದವನು (ಕೀರ್ತನೆ 89:3, 4). ಆತನು ಕನ್ಯೆಯಲ್ಲಿ ಜನಿಸುವನು (ಯೆಶಾಯ 7:14). ಬೆತ್ಲೆಹೇಮಿನಲ್ಲಿ ಜನಿಸುವನು (ಮೀಕ 5:2). ಮುಂದೂತನು, ಆತನ ಮಾರ್ಗವನ್ನು ಸಿದ್ಧಪಡಿಸುವನು (ಯೆಶಾಯ 40:3). ಆತನ ಗಲಿಲಾಯದ ಸೇವೆಯು ಮುಂತಿಳಿಸಲ್ಪಟ್ಟಿತು (ಯೆಶಾಯ 9:1, 2). ಆತನ ಮಾನವಾತೀತ ಜ್ಞಾನವು (ಯೆಶಾಯ 11:1-3) ಮತ್ತು ಆತನ ಬಲವಾದ ಕೃತ್ಯಗಳು ಚಿತ್ರಿಸಲ್ಪಟ್ಟವು (ಯೆಶಾಯ 35:5). ತಂದೆಯ ಮನೆಗಾಗಿ ಆತನ ಅಭಿಮಾನವು ಬೆಂಕಿಯಂತೆ ದಹಿಸುತ್ತದೆ ಎಂಬುದೂ ಸಹ ಮುಂತಿಳಿಸಲ್ಪಟ್ಟಿತು (ಕೀರ್ತನೆ 69:9; ಯೋಹಾನ 2:16, 17).

ಆತನು ಸಂಕಟಕ್ಕೊಳಗಾದನು, ದುಃಖವನ್ನು ತಿಳಿದಾತನು ಮತ್ತು ಪಾಪವನ್ನು ಹೊತ್ತುಕೊಂಡು ಹೋಗುವಾತನು ಆಗಿರುವಂಥದ್ದು ಹಿಂದಿನ ವರ್ಷಗಳಲ್ಲಿ ಹೇಳಿದ ಚಕಿತಗೊಳಿಸುವ ಸಂಗತಿಗಳಾಗಿದ್ದವು (ಯೆಶಾಯ 53:3, 11). ಆತನ ಮೇಲೆ ಚಡಿಯೇಟುಗಳು ಹಾಕಲ್ಪಡುವವು, ಆದರೆ ಆತನು ಯಾವುದೇ ವಿರೋಧ ಮಾಡುವದಿಲ್ಲ (ಯೆಶಾಯ 53:5, 7). ಆತನು ತಿರಸ್ಕರಿಸಲ್ಪಡುವನು (ಯೆಶಾಯ 53:3). ಆತನ ಶಿಷ್ಯರು ಅಂಜುಬರುಕರೆಂದು ಮುಂತಿಳಿಸಲ್ಪಟ್ಟಿದೆ (ಜೆಕರ್ಯ 13:7) ಮೂವತ್ತು ಬೆಳ್ಳಿಯ ನಾಣ್ಯಗಳಿಗಾಗಿ (ಜೆಕರ್ಯ 11:12) ಅವರಲ್ಲಿ ಒಬ್ಬನು ಆತನನ್ನು ಹಿಡಿದು ಕೊಡುವನು (ಕೀರ್ತನೆ 41:9). ಲಂಚವು ಕೊಡಲ್ಪಡುವದಕ್ಕಿಂತ ಬಹಳ ಮೊದಲೇ ರಕ್ತದ ಹಣದ ವ್ಯಯಿಸುವಿಕೆಯು ಮುಂತಿಳಿಸಲ್ಪಟ್ಟಿತು (ಜೆಕರ್ಯ 11:13). ಆತನ ಮೇಲೆ ಉಗುಳುವರು (ಯೆಶಾಯ 50:6), ಅಪರಾಧಿಗಳ ಮಧ್ಯದಲ್ಲಿ ಇಡಲ್ಪಡುವನು (ಯೆಶಾಯ 53:12) ಎಂದೂ ಮುಂತಿಳಿಸಲ್ಪಟ್ಟಿವೆ. ಅಪಹಾಸ್ಯದ ಮಾತುಗಳಿಂದ ಅಪಹಾಸ್ಯ ಮಾಡಲ್ಪಡುವದಲ್ಲದೇ (ಕೀರ್ತನೆ 27:7, 8) ಕಹಿಯಾದ ದ್ರಾಕ್ಷಾರಸವು ಕೊಡಲ್ಪಡುವುದು (ಕೀರ್ತನೆ 69:21). ಚೀಟು ಹಾಕುವದರಿಂದ ಆತನ ಬಟ್ಟೆಗಳು ಹಂಚಿಕೊಳ್ಳಲ್ಪಡುವವು (ಕೀರ್ತನೆ 22:18). ಆತನ ಕೈಕಾಲುಗಳು ತಿವಿಯಲ್ಪಡುವವು (ಕೀರ್ತನೆ 22:16ಸಿ). ಆದರೆ ಯಾವುದೇ ಎಲುಬು ಮುರಿಯಲ್ಪಡುವದಿಲ್ಲ (ಕೀರ್ತನೆ 34:20). ಶಿಲುಬೆಗೆ ಹಾಕಲ್ಪಟ್ಟಾತನು ತನ್ನನ್ನು ಶಿಲುಬೆಗೆ ಹಾಕಿದವರಿಗಾಗಿ ಪ್ರಾರ್ಥಿಸುವನು (ಯೆಶಾಯ 53:12). ಐಶ್ವರ್ಯವಂತರ

ಸಮಾಧಿಯಲ್ಲಿ ಆತನು ಇಡಲ್ಪಡುವನು (ಯೆಶಾಯ 53:9), ಆದರೆ ಆತನ ದೇಹವು ಕೊಳೆಯುವ ಅವಸ್ಥೆ ಹೊಂದುವದಿಲ್ಲ (ಕೀರ್ತನೆ 16:10). ಆತನು ಪರಲೋಕಕ್ಕೆ ಏರಿ ಹೋಗುವನು (ಕೀರ್ತನೆ 45:6; 110:1-3).

ಕ್ಯಾನನ್ ಲಿಡ್ಡನ್ ಅವರು ಹಳೇ ಒಡಂಬಡಿಕೆಯಲ್ಲಿ ಕ್ರಿಸ್ತನ ಬಗ್ಗೆ 332 ಪ್ರವಾದನೆಗಳನ್ನು ಎಣಿಸಿದ್ದಾರೆ.[4] ಅಲ್ಫ್ರೆಡ್ ಎಡರ್ಸಹೈಮ್ ಅವರು 456 ವಾಕ್ಯಗಳು ಕ್ರಿಸ್ತನಿಗೆ ಮತ್ತು ಆತನ ರಾಜ್ಯಕ್ಕೆ ಸಂಬಂಧಿಸಿರುವದನ್ನು ಯಾದಿ ಮಾಡಿದ್ದಾರೆ.[5] ಆಕಸ್ಮಿಕವಾಗಿ ಇವೆಲ್ಲವೂ ಒಬ್ಬ ಮನುಷ್ಯನಲ್ಲಿ ಹೇಗೆ ನೆರವೇರಲ್ಪಟ್ಟಿವೆ? “ದೇವರ ಚಿತ್ತದಂತೆ ನಡೆಯುವದಕ್ಕೆ ಯಾರಿಗೆ ಮನಸ್ಸದೆಯೋ ಅವರಿಗೆ ಈ ಬೋಧನೆಯು ... ಗೊತ್ತಾಗುವುದು” (ಯೋಹಾನ 7:17ಎ) ಎಂದು ಯೇಸು ಹೇಳಿದ್ದರಲ್ಲಿ ಆಶ್ಚರ್ಯವಾಗುವದಿಲ್ಲ. ಅವಿಶ್ವಾಸಕ್ಕಾಗಿ ಯಾವ ನೆಪವೂ ಇರುವದಿಲ್ಲ.

ಧರ್ಮಕ್ಕೆ ಸಂಬಂಧಿಸಿದ ಆ ಇತರ ಪುಸ್ತಕಗಳು (ಇಸ್ಲಾಮ, ಬೌದ್ಧ, ಕನ್‌ಫೂಸಿಯಾನಿಜಮ್, ಝೊರೋ ಆಸ್ಟ್ರಿಯಾನಿಜಮ್) ಭವಿಷ್ಯದ ಬಗ್ಗೆ ಮುಂತಿಳಿಸಲು ಪ್ರಯತ್ನಗಳನ್ನು ಮಾಡಿಲ್ಲ ಎಂಬುದು ಬೈಬಲಿನ ಅದ್ವಿತೀಯತೆಯನ್ನು ತೋರಿಸುತ್ತದೆ. ಬೈಬಲು ಸತ್ಯವಾದದ್ದು ಇಲ್ಲವೇ ಸುಳ್ಳಾದದ್ದು ಎಂಬುದನ್ನು ಸಿದ್ಧಪಡಿಸಿ ತೋರಿಸಲು ತನ್ನ ಪ್ರವಾದನೆಗಳ ಮುಖಾಂತರ ಅವಕಾಶಗಳನ್ನು ಒದಗಿಸಿದೆ. ಧಾರ್ಮಿಕ ಇತರ ಪುಸ್ತಕಗಳು ಅಂಥ ಅವಕಾಶ ತೆಗೆದು ಕೊಳ್ಳಲಾರವು.

ಸ್ವಯಂಕೃತ ಪ್ರವಾದಿಗಳು ಬೈಬಲಿನ ಪ್ರವಾದಿಗಳಿಗೆ ಹೋಲಿಸಲ್ಪಡುವಾಗ, ಯಾರಾದರೂ ಪೇಚಿನಲ್ಲಿ ಸಿಕ್ಕಿಕೊಳ್ಳುವರು. ಉದಾಹರಣೆಗಾಗಿ, ಬ್ರಿಟೀಶ್ ರಾಜಕಾರಣಿ ಜಾರ್ಜ್ ಕ್ಯಾನ್ನಿಂಗ್ ಅವರು (1770-1827) ದಕ್ಷಣ ಅಮೇರಿಕದ ಕಾಲನಿಗಳು ಯುನೈಟೆಡ್‌ಸ್ಟೇಟ್ಸ್‌ದಂತೆ ಬೆಳವಣಿಗೆ ಹೊಂದುವವು ಎಂದು ಮುಂತಿಳಿಸಿದ್ದರು. ರೊಬರ್ಟ್ ಇಂಗರ್‌ಸೋಲ್ ಅವರು (1833-99) ಹತ್ತು ವರ್ಷಗಳೊಳಗಾಗಿ ಪ್ರತಿಯೊಂದು ಸಭೆಗೆ ಎರಡು ಥೇಟರುಗಳು ಇರುವವು ಎಂದು ಮುಂತಿಳಿಸಿದರು. ಇಟ್ಯಾಲಿಯನ್ ಗಣಿತ ತಜ್ಞ ಜೆರೋಮ ಕಾರ್ಡ್ಡಾನ ಅವರು (1501-76) ತನ್ನ ಸ್ವಂತ ಮರಣದ ದಿನ ಮತ್ತು ತಾಸಿನ ಬಗ್ಗೆ ಮುಂತಿಳಿಸಿದರು ಹಾಗೂ ಅದೇ ಯೋಗ್ಯ ಸಮಯದಲ್ಲಿ ಆತ್ಮ ಹತ್ಯೆ ಮಾಡಿಕೊಂಡನು.

## “ಒಬ್ಬನು ಪೂರ್ಣವಾದ ಅತಿಸುಂದರದವನು”

ಬೈಬಲಿನ ಮಾನವನಲ್ಲದ ಮೂಲ ಅತ್ಯುತ್ತಮ ಆಂತರಿಕ ಪುರಾವೆಗಳಲ್ಲಿ ಯೇಸುವಿನ ಪಾತ್ರವಿದೆ. ಯಾವುದೇ ವ್ಯತ್ಯಾಸವಿಲ್ಲದೇ, ವಿಶ್ವಾಸಿಗಳು ಮತ್ತು ಅವಿಶ್ವಾಸಿಗಳು ಇಬ್ಬರೂ ಯೇಸುವಿನ ವ್ಯಕ್ತಿತ್ವಕ್ಕಾಗಿ ಮೆಚ್ಚಿಕೆ ತೋರಿಸಲು ಒಂದಾಗುತ್ತಾರೆ. “ಮಾನವ ಕುಮಾರರೊಳಗೆ ಯೇಸುವಿಗಿಂತ ಹೆಚ್ಚು ದೊಡ್ಡವರು ಯಾರೂ ಹುಟ್ಟಿಲ್ಲ ಎಂದು ಎಲ್ಲಾ ಯುಗಗಳು ಘೋಷಿಸುತ್ತವೆ” ಎಂದು ಅಪನಂಬಿಗಸ್ತ ತತ್ವಜ್ಞಾನಿ ಜೋಸೆಫ್ ರೆನನ್ (1823-92) ಬರೆದಿದ್ದಾನೆ. ಯೇಸುವು ಅದ್ವಿತೀಯನು, ಶಾರೋನಿನ ಗುಲಾಬಿ, ತಗ್ಗಿನ ತಾವರೆ, ಹತ್ತು ಸಾವಿರ ಜನರಲ್ಲಿ ಧ್ವಜ ಪ್ರಾಯನು, ಸರ್ವಾಂಗದಲ್ಲಿಯೂ ಮನೋಹರನು,[6] ವಾಕ್ಯಗಳು ವರ್ಣಿಸಲಾಗದ ದೇವರ ವಾಕ್ಯವು!

ಯೇಸು, ಪರಿಪೂರ್ಣನಾಗಿದ್ದರೂ ಸ್ವನೀತಿಯಿಂದ ಸ್ವತಂತ್ರನಾಗಿದ್ದನು. ಆತನು ದೀನನೂ ದೈನ್ಯತೆಯುಳ್ಳವನೂ ಆಗಿದ್ದನು. ತನ್ನ ಸ್ವಂತ ಅಗತ್ಯತೆಯನ್ನು ಮರೆತುಬಿಟ್ಟು ಪ್ರಾಣಗಳನ್ನು ರಕ್ಷಿಸುವದರೊಂದಿಗೆ ಹಾಗೂ ಕೊರತೆಯಲ್ಲಿರುವವರಿಗೆ - ದ್ವೇಷಿಸಲ್ಪಡುತ್ತಿದ್ದ ಸಮಾರ್ಯದವರಿಗೂ ಸಹ ಸಹಾಯ ಮಾಡುವದರಲ್ಲಿ ಅತ್ಯಾಸಕ್ತಿಯುಳ್ಳವನಾಗಿದ್ದನು. ಯಾವುದೇ ಭೂಲೋಕದ ಅಧಿಕಾರವನ್ನು ಅಪೇಕ್ಷಿಸದೇ,

ದೇವಾಲಯದ ಪವಿತ್ರತೆಗೆ ಅಗೌರವ ತೋರಿಸಿದವರನ್ನು ಬಲವಾಗಿ ತಳ್ಳಿ ಹಾಕಿದನು. ಪ್ರೀತಿಯ ಮತ್ತು ಸೇವೆಯ ಪರಿಪೂರ್ಣ ಉದಾಹರಣೆಯಾದ ಯೇಸು ಇತರರ ನಿಮಿತ್ತವಾಗಿ ತನ್ನನ್ನು ತ್ಯಾಗ ಮಾಡಿಕೊಂಡನು. ಒಬ್ಬನು ಆತನ ಒಳ್ಳೆಯತನವನ್ನು ಸ್ವೀಕರಿಸಿ, ಆತನ ದೈವತ್ವವನ್ನು ಸ್ವೀಕರಿಸುವದನ್ನು ನಿರಾಕರಿಸಲಾರನು.

ಯಾವುದೇ ಮಾನವ ಜೀವಿಯು ಯೇಸುವಿನಂಥ ಒಳ್ಳೆಯ ವ್ಯಕ್ತಿಯನ್ನು ಕಲ್ಪಿಸಲಾರನು. ಸುವಾರ್ತೆಯ ಬರಹಗಾರರು ಆತನ ಬಗ್ಗೆ ಕಥೆಗಳನ್ನು ಕಲ್ಪಿಸಿದ್ದರೆ, ಆಗ ಅವರು ಯೇಸುವಿಗೆ ಸಂಬಂಧಿಸಿದಂತೆ ಯಾವುದೇ ಹೆಚ್ಚು ದೊಡ್ಡ ಅದ್ಭುತವನ್ನು ಅವರು ಸಾಧಿಸಿದರು - ಯಾಕಂದರೆ ಆಗ ಅವರು ಕೇವಲ ಮಾನವರಂತೆ ಪರಿಪೂರ್ಣ ವ್ಯಕ್ತಿಯನ್ನು ಸೃಷ್ಟಿಸಿದರು ಮತ್ತು ನೀತಿಗಳ ಪರಿಪೂರ್ಣ ಪದ್ಧತಿಯನ್ನು ಊಹಿಸಿದರು.

ಅಪೊಸ್ತಲರು ಯೇಸುವನ್ನು ಕಲ್ಪಿಸುವಷ್ಟು ಒಳ್ಳೆಯವರೂ ಇಲ್ಲವೇ ದೊಡ್ಡವರೂ ಆಗಿರಲಿಲ್ಲವೆಂದು ಒಬ್ಬ ಪಂಡಿತನು ಸೂಚಿಸಿದ್ದಾನೆ. ರಾಜ್ಯದ ಬಗ್ಗೆ ಅವರ ವಿಚಾರಗಳು ಪ್ರಾಪಂಚಿಕವಾದವುಗಳಾಗಿದ್ದವು (ಮಾರ್ಕ 10:35-45); ಫರಿಸಾಯರ "ಹುಳಿಯನ್ನು" ಅವರು ಅರಿತುಕೊಳ್ಳಲಿಲ್ಲ (ಮತ್ತಾಯ 16:5-12); ಸ್ವಾರ್ಥದ ಅಲ್ಲಗಳೆಯುವಿಕೆಯನ್ನು ಅರ್ಥಮಾಡಿಕೊಳ್ಳಲಿಲ್ಲ (ಮತ್ತಾಯ 16:21-26); ಅವರಲ್ಲಿ ನೈತಿಕ ಧೈರ್ಯದ ಕೊರತೆಯಿತ್ತು (ಮತ್ತಾಯ 26:31-35; 51-56, 69-75); ಇತರ ಜನಾಂಗಗಳ ಮೇಲೆ ಅವರಿಗೆ ದುರಾಗ್ರಹವಿತ್ತು (ಲೂಕ 9:51-56).

## "ನಾನು ನಂಬಿರಲಿಲ್ಲ"

"ನಾನು ಬಂದು ನನ್ನ ಕಣ್ಣುಗಳಿಂದ ನೋಡುವವರೆಗೆ ನಾನು ನಂಬಿರಲಿಲ್ಲ" ಎಂದು ಶೇಬದ ರಾಣಿಯು ಸೊಲೊಮೋನನಿಗೆ ಹೇಳಿದಳು (1 ಅರಸು 10:7ಎ; 2 ಪೂರ್ವಕಾಲ ವೃತ್ತಾಂತ 9:6ಎ). ಹಾಗೆಯೇ, ಅನೇಕ ನಾಸ್ತಿಕರು ಮತ್ತು ಬೈಬಲನ್ನು ನಂಬದಿರುವವರು ಕ್ರಿಸ್ತನಿಗಾಗಿ ಪುರಾವೆಗಳನ್ನು ಪರೀಕ್ಷಿಸುವ ವರೆಗೆ ಇದ್ದಾರೆ. ಹಾಗೆ ಮಾಡುವಲ್ಲಿ ಮಾನವ ಜೀವಿತಗಳಲ್ಲಿ ಕ್ರಿಸ್ತನು ಯಾವ ಅರ್ಥವುಳ್ಳವನಾಗಿರುವನು ಎಂಬುದರ ಬಗ್ಗೆ "ಅರ್ಧದಷ್ಟು" ಅವರಿಗೆ ಹೇಳಲ್ಪಟ್ಟಿರುವದಿಲ್ಲವೆಂಬುದನ್ನು ಅವರು ಕಂಡುಕೊಂಡಿದ್ದಾರೆ.

ಸರ್ ಜಾರ್ಜ್ ಲಿಟ್ಟೆಲ್‌ಟನ್ ಎಂಬುವನು (1709-73) ಇಂಗ್ಲಾಂಡಿನ ಎಟನ್ ಮತ್ತು ಆಕ್ಸಫರ್ಡಗಳಲ್ಲಿ ಶಿಕ್ಷಣ ಹೊಂದಿದನು. ಅವನು ಪಾರ್ಲಿಮೆಂಟನ್ನು ಪ್ರವೇಶಿ ಸಿದನು ಮತ್ತು ಖಜಾನೆಯಲ್ಲಿ ದೊಡ್ಡ ಹುದ್ದೆಯನ್ನು ಹೊಂದಿದ್ದನು, ಪಂಡಿತನಾಗಿದ್ದನು. ಅವನ ಆತ್ಮ ಚರಿತ್ರೆಯು ಡಾ. ಸಾಂವೆಲ್ ಜಾನ್‌ಸನ್ ಅವರಿಂದ ಬರೆಯಲ್ಪಟ್ಟಿತು. ಹದಿನೆಂಟನೆಯ ಶತಮಾನದ ಅನೇಕ ಲೇಖಕರಂತೆ, ಲಿಟ್ಟೆಲ್‌ಟನ್ ಮತ್ತು ಅವನ ಸ್ನೇಹಿತ ಗಿಲ್ಬರ್ಟ್ ವೆಸ್ಟ್ ಅವರು ಕ್ರೈಸ್ತ ಧರ್ಮವನ್ನು ತಿರಸ್ಕರಿಸಿದರು. ಅವರು ಹೆನ್ರಿ ಸೆಸ್ಟ್. ಜಾನ್ ಬೋಲಿಂಗ್‌ಬ್ರೂಕ್, ಫಿಲಿಪ್ಪ್ ಚೆಸ್ಟರ್‌ಫೀಲ್ಡ್, ಅಲೆಕ್ಸಾಂಡರ್ ಪೋಪ್, ಹಾಗೂ ಇತರ ನಾಸ್ತಿಕರಿಂದ ಅವರು ಪ್ರಭಾವಿತರಾಗಿದ್ದರು. ಬೈಬಲು ಮೋಸಕರವಾದದ್ದೆಂದು ಸಂಪೂರ್ಣವಾಗಿ ನಂಬಿಸಲ್ಪಟ್ಟು ಲಿಟ್ಟೆಲ್‌ಟನ್ ಹಾಗೂ ವೆಸ್ಟ್ ಅವರು ಆ "ಮೋಸವನ್ನು" ಯೇಸು ಕ್ರಿಸ್ತನನ್ನು ಬಹಿರಂಗ ಪಡಿಸಲು ತೀರ್ಮಾನಿಸಿಕೊಂಡರು.

ಲಿಟ್ಟೆಲ್‌ಟನ್ ಅವರು ಪೌಲನ ಮಾರ್ಪಡುವಿಕೆಯನ್ನು ಮತ್ತು ವೆಸ್ಟ್ ಅವರು ಕ್ರಿಸ್ತನ ಪುನರುತ್ಥಾನವನ್ನು ಖಂಡಿಸಲು ಆಯ್ದುಕೊಂಡರು. ಪ್ರತಿಯೊಬ್ಬರು ಪ್ರಾರಂಭಿಸುವಾಗ ಪೂರ್ವಾಪರ ದೋಷಭಾವನೆಗಳಿಂದ ತುಂಬಿಕೊಂಡಿದ್ದರು. ಆದರೆ ಅವರ ಪ್ರತ್ಯೇಕ

ವಾದ ಅಧ್ಯಯನಗಳು ಹಾಗೂ ಕ್ರೈಸ್ತತ್ವವನ್ನು ತೆಗೆದು ಹಾಕುವ ಅವರ ಪ್ರಯತ್ನಗಳು ಅವರು ದೇವರಲ್ಲಿ ಮತ್ತು ಆತನ ವಾಕ್ಯದಲ್ಲಿ ನಂಬಿಕೆಯುಳ್ಳವರಾಗುವದರಲ್ಲಿ ಪರಿಣಾಮಗೊಂಡವು. ತಮ್ಮ ಅಧ್ಯಯನಗಳ ನಂತರ ಅವರು ಒಂದಾಗಿ ಕೂಡಿ ಬಂದರು. ಬಹಿರಂಗವಾದ ಕುಟಿಲ ತಂತ್ರಕ್ಕಾಗಿ ಸಂಭ್ರಮ ವ್ಯಕ್ತ ಪಡಿಸುವದಕ್ಕಲ್ಲ ಆದರೆ ತಾವು ಕಂಡುಕೊಂಡದ್ದರಲ್ಲಿ ಆನಂದಿಸುವದಕ್ಕಾಗಿ ಇತ್ತು.

ಪ್ರತಿಯೊಬ್ಬನು ಒಂದೊಂದು ಪ್ರಬಂಧ ಬರೆದನು: ವೆಸ್ಟ್‌ನು, "ಕ್ರಿಸ್ತನ ಪುನರುತ್ಥಾನದ ಮೇಲೆ ಅವಲೋಕನಗಳು" ಎಂದು ಹಾಗೂ ಲಿಟ್ಟೆಲ್‌ಟನ್‌ನು "ಸೇಂಟ್ ಪೌಲನ ಮಾರ್ಪಡುವಿಕೆಯ ಮೇಲೆ ಅವಲೋಕನ" ಎಂಬುದರ ಮೇಲೆ ಬರೆದರು. ಲಿಟ್ಟೆಲ್‌ಟನ್ ಅವರು ಬರೆದ ಅವಲೋಕನವು ವೆಸ್ಟ್ ಅವರಿಗೆ ಒಂದು ಪತ್ರದ ರೂಪದಲ್ಲಿ ಪ್ರಕಟಿಸಲ್ಪಟ್ಟಿತು. ಅದರ ಪ್ರಾರಂಭದಲ್ಲಿ ಹೀಗಿತ್ತು: "... (ಪೌಲನ) ಮಾರ್ಪಡುವಿಕೆಯು ತಾನೇ ಕ್ರೈಸ್ತತ್ವವು ದೈವಿಕ ಪ್ರಕಟನೆಯಾಗಿದೆ ಎಂದು ಸಿದ್ಧಪಡಿಸಿ ತೋರಿಸಲು ಸಾಕಷ್ಟಾದ ಪ್ರದರ್ಶನವಾಗಿತ್ತು."[7]

ಲಿಟ್ಟೆಲ್‌ಟನ್ ಪೌಲನಿಗಾಯಿತೆಂಬ ಮಾರ್ಪಾಡಿನ ಬಗ್ಗೆ ಆಳವಾಗಿ ವಿಚಾರಣೆ ನಡಿಸಿದರು.[8] ನಾಲ್ಕು ಸಾಧ್ಯವಾದ ತೀರ್ಮಾನಗಳನ್ನು ತೆಗೆದುಕೊಳ್ಳಬಹುದೆಂಬ ನಿರ್ಣಯಕ್ಕೆ ಬಂದರು; (1) ಸೌಲನು ದಮಸ್ಕದ ದಾರಿಯಲ್ಲಿಯ ದರ್ಶನವನ್ನು ಸುಳ್ಳಾಗಿ ಹೇಳಿದನು; (2) ಅವನು, ಅತಿಯಾದ ಆಸಕ್ತಿಯುಳ್ಳವನಾಗಿ, ತಾನು ಒಂದು ದರ್ಶನ ನೋಡಿದೆನೆಂದು ತಪ್ಪಾಗಿ ಯೋಚಿಸಿದನು; (3) ಕ್ರೈಸ್ತರು ಅವನನ್ನು ಮೋಸಪಡಿಸಿದರು; (4) ಅವನು ಸತ್ಯವನ್ನು ಹೇಳಿದನು.

ಮೊದಲನೆಯ ವಿಷಯವು ಕೂಡಲೇ ತಿರಸ್ಕರಿಸಲ್ಪಟ್ಟಿತು, ಅಂಥ ಸಂಗತಿಯನ್ನು ಪೌಲನು ಯಾಕೆ ಸುಳ್ಳಾಗಿ ಹೇಳಬೇಕು ಹಾಗೂ ಅದು ಅವನ ಜೀವನ ಮಾರ್ಗವನ್ನು ಬದಲಾಯಿಸಬೇಕು ಮತ್ತು ಆಮೇಲೆ ಆ ಸುಳ್ಳಿಗಾಗಿ ಯಾಕೆ ಸಾಯಬೇಕು? ಮೋಸಗಾರರಿಗೆ - ಆಸ್ತಿ ಅಧಿಕಾರ, ವಿಷಯಾಸಕ್ತಿ, ಇಲ್ಲವೇ ಕೀರ್ತಿಗಾಗಿ - ತಮ್ಮ ಸುಳ್ಳುತನಗಳನ್ನು ಮುಚ್ಚಿಕೊಳ್ಳುವದಕ್ಕಾಗಿ ಅಂಥ ಉದ್ದೇಶಗಳಿರುತ್ತವೆ. ಅಂಥ ಉದ್ದೇ ಶಗಳನ್ನು ಪೌಲನಿಗೆ ಹೊಂದಿಸಲಾಗದ್ದರಿಂದ ಮೊದಲನೆಯ ಅಭಿಪ್ರಾಯವನ್ನು ತಿರಸ್ಕರಿಸಲು ಕಾರಣವು ಒತ್ತಾಯ ಮಾಡುತ್ತದೆ.

ಎರಡನೆಯ ಸಾಧ್ಯತೆಯು ಪೌಲನು ತಾನು ಏನು ನೋಡಿದ್ದೇನೆಂಬುದರ ಬಗ್ಗೆ ತಪ್ಪಾಗಿ ಯೋಚಿಸಿದ ಮತಭ್ರಾಂತನಾಗಿ ಮಾಡುತ್ತದೆ. ಹೀಗಿದ್ದರೂ ಪೌಲನು ಆಕಾಶಗಳಲ್ಲಿ ಕಾಲ್ಪನಿಕ ದರ್ಶನಗಳನ್ನು ನೋಡುವದಕ್ಕಾಗಿ ಬಹಳ ವಿಧವಾದ ಮನಸ್ಸಿನ ಭಾವದಲ್ಲಿದ್ದನು. ಯೇಸುವು ಮೋಸಗಾರನೆಂದು ಬಹಿರಂಗ ಪಡಿಸುವದರ ಮೇಲೆಯೇ ಅವನು ಸಂಪೂರ್ಣವಾಗಿ ಆಸಕ್ತನಾಗಿದ್ದನು ತಪ್ಪಾಗಿ. ಅತ್ಯಾಸಕ್ತಿಯುಳ್ಳವನು ತನ್ನ ಭ್ರಮೆಯ ಕಡೆಗೆ ಮಾನಸಿಕವಾಗಿ ಹೊಂದಿಕೊಂಡವನಾಗಿರುವನು. ಪೌಲನ ಮನೋ ಭಾವನೆಯು ಇದಕ್ಕೆ ವಿರುದ್ಧವಾಗಿತ್ತು. ಅವನ ಇಡೀ ಜೀವನವು, ಸಂಶೋಧನೆ ಮಾಡದ ಮಾನಸಿಕ ಉದ್ವೇಗಕ್ಕೊಳಪಡಿಸಿದ್ದಕ್ಕಿಂತ ಹೆಚ್ಚಾಗಿ ವಿಚಾರಿಸಲಿಕ್ಕೆ, ಭಿನ್ನತೆ ಕಂಡು ಹಿಡಿಯಲಿಕ್ಕೆ ಹಾಗೂ ಜಾಗರೂಕ ವಿಶ್ಲೇಷಣ ಮಾಡಲಿಕ್ಕೆ ಒಳಪಟ್ಟಿತ್ತು. ಹೀಗೆ ಎರಡನೆಯ ವಿಚಾರವು ಅಗ್ರಾಹ್ಯವಾದದ್ದೆಂದು ಲಿಟ್ಟೆಲ್‌ಟನ್ ವಾದಿಸಿದರು. 1 ಕೊರಿಂಥ 13:1-13ರಲ್ಲಿ ಅದ್ಭುತಕಾರ್ಯಗಳು ಹೆಚ್ಚಾಗಿ ಪರೋಪಕಾರವನ್ನು ಇಟ್ಟದ್ದನ್ನು ಕುರಿತು "ಇದು ತೀವ್ರ ಆಸಕ್ತಿಯ ಭಾಷೆಯಾಗಿರುವದೇನೋ? ... ಮತಭ್ರಾಂತ ಭ್ರಮೆಗೆ ಒಳಪಟ್ಟ ಮನುಷ್ಯನ ಮನೋಭಾವನೆ ಇಲ್ಲವೇ ಅಭಿಪ್ರಾಯಗಳು ಈ ವಾಕ್ಯಗಳಲ್ಲಿ ಕಂಡುಬರುವದಿಲ್ಲ ..."[9] ಎಂದು ಲಿಟ್ಟೆಲ್‌ಟನ್ ಬರೆದನು.

ಮೂರನೆಯ ವಿಚಾರವನ್ನು ಕುರಿತು, ಕ್ರೈಸ್ತರು ಮೋಸಕರವಾದ ವ್ಯವಹಾರದಲ್ಲಿದ್ದರೂ, ಪೌಲನು ಅವರನ್ನು ನಂಬುತ್ತಿರಲಿಲ್ಲ. ಅವನು ಕ್ರೈಸ್ತರನ್ನು ಕೊಲ್ಲುತ್ತಿದ್ದನು ಮತ್ತು ಅವರ ಮಾತಿಗೆ ಕಿವಿಗೊಡುತ್ತಿರಲಿಲ್ಲ. ಮೂರನೆಯ ವಿಚಾರವು ಬಹಳ ಬಲಹೀನವಾದದ್ದಾಗಿ ಕಾಣುತ್ತದೆ.

ಇತರ ಸಾಧ್ಯವಾದ ವಿಚಾರಗಳನ್ನು ಕೈಬಿಟ್ಟನಂತರ, ಲಿಟ್ಟೆಲ್‌ಟನ್‌ನು ಪೌಲನು ನಿಜವಾಗಿಯೂ ಯೇಸುವಿನ ಅದ್ಭುತಕರವಾದ ದರ್ಶನವನ್ನು ನಿಜವಾಗಿಯೂ ನೋಡಿದನು ಎಂಬ ದೃಢ ತೀರ್ಮಾನ ಹೊಂದಿದನು. ಪೌಲನ ಹೇಳಿಕೆಯ ಸಾಧ್ಯತೆಯು, ಪೌಲನಂಥ ಬಲವಾದ ಮನಸ್ಸಿನ ಮನುಷ್ಯನಿಗೆ ಯೇಸುವನ್ನು ಹಿಂಸಿಸುವದರಿಂದ ಯೇಸುವಿಗಾಗಿ ಪ್ರಾಣಕೊಡುವಷ್ಟು ತೀಕ್ಷ್ಣವಾಗಿ ಬದಲಾಗುವುದು ಕೇವಲ ತಾರ್ಕಿಕವಾದ ವಿವರಣೆಯಾಗಿದೆ.

ಲಿಟ್ಟೆಲ್‌ಟನ್‌ನ ಪ್ರಕಟನೆಯು ಅಷ್ಟು ದೃಢಪಡಿಸುವದಾಗಿತ್ತು. ಧರ್ಮನಿಂದಕರು ಒಂದು ಉತ್ತರವನ್ನಾದರೂ ಎಂದೆಂದೂ ಕಲ್ಪಿಸಲು ಶಕ್ತರಾಗದಷ್ಟು ಆ ಪ್ರಬಂಧವು ಇತ್ತು ಎಂದು ಡಾ. ಸಾಂವೇಲ್ ಜಾನ್‌ಸನ್ ಅವರು ಅಭಿಪ್ರಾಯಪಟ್ಟರು. ಲಿಟ್ಟೆಲ್‌ಟನ್‌ರ ನಿಕಟ ಸ್ನೇಹಿತರಾದ ಡಾ. ಫಿಲಿಪ್ಪ್ ಡೊಡ್‌ರಿಡ್ಜ್ ಅವರು ಈ ಪ್ರಕಟನೆಯನ್ನು "ನಿಪುಣತೆಯುಳ್ಳದ್ದು" ಹಾಗೂ "ನಮ್ಮ ಯುಗವು ರಚಿಸಿದ ಯಾವುದೇ ಕೃತಿಯಷ್ಟು ಪರಿಪೂರ್ಣವಾದದ್ದು" ಎಂದು ವಿವರಿಸಿದರು.

## ಮುಕ್ತಾಯ

ಬೈಬಲಿನೊಳಗೆ ಬೈಬಲು ದೇವರಿಂದ ಬಂದಿತೆಂಬ ಪುರಾವೆಯಿದೆ. ಹಳೇ ಒಡಂಬಡಿಕೆಯಲ್ಲಿ ಅತ್ಯಾಶ್ಚರ್ಯಕರವಾದ ಪ್ರವಾದನೆಗಳು ಯೇಸುವಿನ ಪರಿಪೂರ್ಣ ಜೀವನದೊಂದಿಗೆ ಯೇಸುಕ್ರಿಸ್ತನಲ್ಲಿ ಅವುಗಳ ನೆರವೇರುವಿಕೆಯು ಪರಿಶುದ್ಧ ಬರಹಗಳ ದೈವಿಕ ಲಕ್ಷಣವನ್ನು ತೋರಿಸುತ್ತದೆ. ದೇವರ ಪ್ರೇರೇಪಿತ ವಾಕ್ಯದಂತೆ ಬೈಬಲನ್ನು ಸ್ವೀಕರಿಸಲಿಕ್ಕೆ ಪ್ರತಿಯೊಬ್ಬ ಮಾನವ ಜೀವಿಗೆ ಅದು ಉಳಿಯುತ್ತದೆ.

---

ಟಿಪ್ಪಣಿಗಳು

[1]ಅಶ್ಶೂರ್ಯರು ಪಟ್ಟಣದಮೇಲೆ ದಾಳಿ ಮಾಡುತ್ತಿದ್ದಾಗ, ಯೆರೂಸಲೇಮಿನೊಳಗೆ ನೀರು ಬರುವಂತೆ ಮಾಡಲು ಸಿಲೋವದ ಸುರಂಗ ಮಾರ್ಗವು ಕಟ್ಟಲ್ಪಟ್ಟಿತು. 1880ರಲ್ಲಿ ಸುರಂಗ ಮಾರ್ಗದಲ್ಲಿ ದೊರೆತ ಶಿಲಾಶಾಸನವು ಹಿಜ್ಕೀಯನ ಆಳಿಕೆಯ ಲೆಕ್ಕಾಚಾರ ಮಾಡಿದ ಸಮಯಕ್ಕೆ ಒಪ್ಪುತ್ತದೆ (ಸುಮಾರು ಕ್ರಿ.ಪೂ. 716-687). ಸುರಂಗ ಮಾರ್ಗವು ತಾನೇ 2 ಅರಸ 20:20ರಲ್ಲಿ ಹೇಳಿದ ಘಟನೆಗಳನ್ನು ದೃಢಪಡಿಸುತ್ತದೆ. (Merrill C. Tenney, ed., *The Zondervan Pictorial Encyclopedia of the Bible* [Grand Rapids Mich.: Zondervan Publishing House, 1975], s.v. "Hezekiah" and "Siloam"). [2]T. Harrison, *Three Hundred Testimonies in Favor of Religion and the Bible by Distinguished Men and Women* (Cincinnati: Robert Clarke & Co., 1888), 340. [3]ಅಗ್ರಿಪ್ಪನ ಸಹೋದರಿ ದ್ರುಸಿಲ್ಲಳು ಯೆಹೂದ್ಯಳೆಂದು ಅಪೊಸ್ತಲರ ಕೃತ್ಯ 24:24ರಲ್ಲಿ ಕರೆಯಲ್ಪಟ್ಟಿದ್ದಾಳೆ. [4]Floyd E. Hamilton, *The Basis of the Christian Faith,* 3d ed. (New York: Harper & Brothers, 1946), 156-57. [5]Alfred Edersheim, *Life and Times of Jesus the Messiah* (New York: Longmans, Green, and Co., 1900), 2:710-41. [6]ಪರಮಗೀತ 2:1 ಮತ್ತು 5:10, 16ರಿಂದ ತೆಗೆದುಕೊಂಡ ಮಾತುಗಳು ಪ್ರಸಿದ್ಧ ಸಂಗೀತಗಳಲ್ಲಿ ಯೇಸುವಿಗೆ ಅನ್ವಯಿಸಲ್ಪಟ್ಟಿವೆ. [7]George Lyttelton, "Lord Lyttelton on the Conversion of St. Paul," in James D. Bales,

*Saul: From Persecutor to Persecuted* (Shreveport, La.: Lambert Book House, 1975), 106. [8]ಪೌಲನ ಮಾರ್ಪಡುವಿಕೆಯ ವಿವರಣೆಗಳು ಅಪೊಸ್ತಲರ ಕೃತ್ಯ 9, 22; ಮತ್ತು 26ರಲ್ಲಿವೆ. [9]Lyttelton, 129.

© 2009 Truth for Today